ಉಷಾ ನರಸಿಂಹನ್

# ಲೋಕಸತ್ಯವಾಗದ...

ನಾನೀ ಸುಳ್ಳನ್ನು ನೂರನೇ ಬಾರಿ ಹೇಳುತ್ತಿರುವುದು. ಯಾವುದೇ ಸುಳ್ಳನ್ನು ನೂರು ಬಾರಿ ಹೇಳಿದಾಗ ಅದು ಸತ್ಯವೇ ಆಗಿ ಬಿಡುವ ಅಪಾಯವಿರುತ್ತದಂತೆ! ಅದು ತಪ್ಪಿಸಿಕೊಳ್ಳುವ ಉಪಾಯವೋ ಇಲ್ಲ ಅಪಾಯವೋ... ಏನಾದರಿರಲಿ. ನನಗೀ ಸುಳ್ಳಿನಿಂದ ಏನೂ ಆಗಬೇಕಿಲ್ಲ. ಯಾವತ್ತಿಗೂ ನನಗಿದು ಬೇಕೇ ಇರಲಿಲ್ಲ. ಬೇರೆಯವರಿಗಾಗಿ ಸುಳ್ಳು ಹೇಳುವುದು ಯಾಕಾಗಿ ಮಾಡುತ್ತೇವೋ ಈ ವರೆಗೂ ಅರ್ಥವಾಗಿಲ್ಲ. ಪೂರ್ತಿ ನಿಸ್ವಾರ್ಥವಾಗಿ ಸುಳ್ಳು ಹೇಳಿ, ಪೋಷಿಸಿ, ನೀರೆರೆದು ಈಗ ಅದೊಂದು ದೊಡ್ಡ ಮರವಾಗಿ ಬೆಳೆಯಿತೆಂದರೆ ಯಾರೂ ನಂಬುವುದಿಲ್ಲ. ಸ್ವತಃ ನಾನೂ! ನಿಸ್ವಾರ್ಥದಲ್ಲಿ ಸ್ವಾರ್ಥವೂ ಇಲ್ಲದಿಲ್ಲ. ಮೊದಮೊದಲು ಈ ಸುಳ್ಳು ಹೇಳುವಾಗ ಹೆದರಿಕೆಯಾಗುತ್ತಿತ್ತು. ನಂತರದ ದಿನಗಳಲ್ಲಿ ಮುಜುಗರವಿತ್ತು. ಆಮೇಲಾಮೇಲೆ ಕೊಂಚ ಧೈರ್ಯ, ಆತ್ಮವಿಶ್ವಾಸದಲ್ಲಿ ಹೇಳತೊಡಗಿದೆ. ಆಮೇಲಿನದು ಬಿಡಿ... ಪ್ರಚಂಡ ಹುಮ್ಮಸ್ಸಿನಲ್ಲಿ ಖಡಾಖಂಡಿತವಾಗಿ ಸುಳ್ಳಾಡತೊಡಗಿದೆ. ನಾನಾಡುತ್ತಿದ್ದ ಆ ಸುಳ್ಳು ಅದೆಷ್ಟು

